*ಕೆ.ಮಹಮದ್ ರಫಿ, ಕೊಟ್ಟೂರು*
*ಹುಡುಗ ಹುಡುಗಿಗೆ ಕಣ್ಣು ಹೊಡೆದರೆ ತಪ್ಪು ಅಂತಾರೆ. ಹುಡುಗಿ ಹುಡುಗನಿಗೆ ಕಣ್ಣು ಹೊಡೆದರೆ?*



ಬೆಪ್ಪು ಅಂತಾರೆ!

*ಸಿ. ಕನಕರಾಜು, ಕುಶಾಲನಗರ*
*ರಾಜಕಾರಣಿಗಳಿಗೇಕೆ ಹಂದಿಜ್ವರ ಬರುವುದಿಲ್ಲ?*
ಇವರ ಮೈಯಲ್ಲಿರುವ ವಿಷದಿಂದ ಆ ವೈರಸ್‌ಗಳೇ ಸತ್ತುಹೋಗುವುದರಿಂದ!

*ಎಸ್.ಜಿ.ಕರನಂದಿ, ಹುನಗುಂದ*
*ಅಂದು ಸ್ವಾಮಿ ವಿವೇಕಾನಂದರು ಯುವಕರಿಗೆ ನೀಡಿದ ಕರೆ ಇಂದು ಯಾವ ಹಂತದಲ್ಲಿದೆ?*
ಕಾಲದ ಕಾಲ್ತುಳಿತಕ್ಕೆ ಸಿಕ್ಕಿ ಕರೆ ಮರೆಯಾಗಿದೆ!

*ಎಂ.ಜಿ.ನೇಹವರ್ಷಿಣಿ, ಬಳ್ಳಾರಿ*
*ಮಂತ್ರಿಗಳಿಗೆ ಗ್ರಹಣ ಹಿಡಿಯುವುದು ಯಾವಾಗ?*
ಪದವಿಗ್ರಹಣ ತಪ್ಪಿದಾಗ!

*ಶಿವಮೊಗ್ಗ ರಮೇಶ್, ಮೈಸೂರು*
*ನಮಗೆ ಬಾಧಿಸುವ ಜನಸಂಖ್ಯೆಯ ಸಮಸ್ಯೆ ಚೀನಾದೇಶಕ್ಕೆ ಏಕೆ ಬಾಧಿಸುತ್ತಿಲ್ಲ?*
ಅಲ್ಲಿ ಜನತೆ ಇದ್ದರೂ ಜಡತೆ ಇಲ್ಲ!

*ಕೆ.ಎನ್.ನಾರಾಯಣರೆಡ್ಡಿ, ಕೆ.ಜಿ.ಎಫ್*
*ವಿಷಪೂರಿತ ಹಾವು ರಾಜಕಾರಣಿಗಳನ್ನು ಕಚ್ಚಿದರೆ ಏನಾಗುತ್ತದೆ?*



ಹಾವು ಸಾಯುತ್ತದೆ!

*ಶಾಲಿನಿ ಜಾಮದಾರ, ಧಾರವಾಡ*
*ಭ್ರಷ್ಟಾಚಾರದ ಸೋಂಕಿಲ್ಲದ ಇಲಾಖೆ ಹುಡುಕಿದರೆ ಸಿಗಬಹುದೆ?*
ಖಂಡಿತ ಸಿಗುತ್ತದೆ, ಆದರೆ ನಮ್ಮ ದೇಶದ ಬದಲು ಅನ್ಯದೇಶದಲ್ಲಿ ಹುಡುಕಬೇಕಷ್ಟೆ.

*ಎಂ.ಜಿ.ರಾಮಚಂದ್ರ, ಮಂಡಗಳಲೆ*
*ನಾನು ಒಬ್ಬನ ಸ್ವಭಾವವನ್ನು ತಿದ್ದುವ ಕೈಂಕರ್ಯಕ್ಕೆ ಕೈ ಹಾಕಿದ್ದೇನೆ; ಮುಂದುವರಿಸಲೆ...?*
ಆದರೆ... ಮೊನ್ನೆಯಷ್ಟೇ ನಿಮ್ಮ ಪತ್ನಿ ನಿಮ್ಮ ಸ್ವಭಾವದ ಬಗ್ಗೆಯೇ......

*ಆದಿನಾರಾಯಣಮುನಿ, ಆದಿವಾಲ*
*ಗುರು ಪದವನ್ನು ಈಗ ಟ್ರಾವಲ್ ಗುರು, ಲವ್ ಗುರು... ಹೀಗೆ ಬಳಸುತ್ತಿದ್ದಾರಲ್ಲಾ...?*
ಅದು ಹಾಗಲ್ಲ, ಟ್ರಾವಲ್‌ಗೂ ರೂ, ಲವ್‌ಗೂ ರೂ, ಎಂದು. ಪ್ರತಿಯೊಂದೂ ರೂಪಾಯಿ ಆಧಾರಿತ ಎಂದರ್ಥ!

*ಹೆಚ್.ಆರ್.ದಿವ್ಯಾರಾಣಿ, ಹಿರಿಸಾವೆ*
*ಜೀವ, ಜೀವನಕ್ಕೆ ವ್ಯತ್ಯಾಸವೇನು?*
ತಾಯಿ ಮತ್ತು ಸತಿಯಷ್ಟು. ತಾಯಿ ನೀಡುವುದು ಜೀವ, ಸತಿ ನೀಡುವುದು ಜೀವನ.

*ರಾಘವೇಂದ್ರ ನಲವಡೆ, ನರಗುಂದ*
*ನೋವು, ನಲಿವು, ರಕ್ತ ಎಲ್ಲರಿಗೂ ಒಂದೇ ಆಗಿದ್ದರೂ ನಮ್ಮ ಸಮಾಜದಲ್ಲಿ ಮೇಲ್ಜಾತಿ, ಕೀಳ್ಜಾತಿಗಳೇಕೆ?*
ರಾಜಕಾರಣದಿಂದ, ರಾಜಕಾರಣಿಗಳಿಗಾಗಿ, ರಾಜಕಾರಣಿಗಳಿಗೋಸ್ಕರ!

*ರಮೇಶ್, ಹನುಮನಾಳು*
*ಬಹುಮಾನಿತ ಪ್ರಶ್ನೆಗೆ ನೀವು ಕೊಡುವುದಾದರೂ ಏನು ಮಿ॥ ರಾಮ್?*
ವಿಳಾಸವಿದ್ದವರಿಗೆ ಗೌರವಧನ, ಇಲ್ಲದವರಿಗೆ ಗೌರವ!

*ಭುವನೇಶ್ವರಿ ಎಸ್ ಸಾಲಿಮಠ, ಹಾನಗಲ್ಲ*
*ಹೆಣ್ಣು ಮದುವೆಯಾಗಿದ್ದಾಳೆ ಎಂಬುದಕ್ಕೆ ತಾಳಿಯೇ ಸಾಕ್ಷಿ. ಗಂಡು ಮದುವೆಯಾಗಿರುವುದಕ್ಕೆ ಸಾಕ್ಷಿ?*
ಹ್ಯಾಪ್‌ಮೋರೆ!

*ದೇಶವಳ್ಳಿ ಶಿವು, ದೇಶವಳ್ಳಿ*
*ಬೀಸೋದೊಣ್ಣೆಯಿಂದ ತಪ್ಪಿಸಿಕೊಂಡರೆ ನೂರುವರ್ಷ ಆಯಸ್ಸು ಅಂತಾರಲ್ಲಾ...?*
ಅದು ಅಂದಿನ ಮಾತು. ಈಗ ನಡೆಯೋ ರೈಡ್‌ನಿಂದ ತಪ್ಪಿಸಿಕೊಂಡರೆ ನೂರು ಕೋಟಿ ಆಸ್ತಿ!

*ಮಂಜುನಾಥ ಸುತಾರ, ಬೆಳಗಾವಿ*
*ಮನುಷ್ಯರಿಗೆ ಮಾತನಾಡುವ ಶಕ್ತಿ ಇಲ್ಲವಾಗಿದ್ದರೆ ಜಗಳ, ಬೈಗುಳ, ಭಾಷಾ ಸಮಸ್ಯೆಗಳಿಲ್ಲದೆ ಸುಖವಾಗಿರಬಹುದಿತ್ತಲ್ಲವೆ?*
ಛೆ! ಸಮಸ್ಯೆಗಳೇ ಇಲ್ಲದಿದ್ದರೆ ಪೊಲೀಸರು, ವಕೀಲರು, ಪುಢಾರಿಗಳು, ರಕ್ಷಣಾ ಪಡೆಗಳ ಗತಿ?!

## ಬಹುಮಾನಿತ ಪ್ರಶ್ನೆ

*ಗಾಯತ್ರಿ, ರಾಜಾಜಿನಗರ, ಬೆಂಗಳೂರು.*
*ದಿನಾ ಸಾಯುವವರಿಗೆ ಅಳುವವರು ಯಾರು?*
ತಮಿಳರ ಬ್ಯಾಂಡ್‌ನವರು!

*ಎಂ.ಆರ್.ಪವನ್ ಕುಮಾರ್, ಬಳ್ಳಾರಿ*
*ಲಾಟರಿಗೂ, ಶೇರು ಮಾರುಕಟ್ಟೆಗೂ ಇರುವ ವ್ಯತ್ಯಾಸವೇನು?*
ಲಾಟರಿ ಸುಂಟರಗಾಳಿ, ಶೇರು ಸುನಾಮಿ.

*ಎಂ. ಎಸ್. ಸುಕನ್ಯಾಬಾಯಿ, ಬಳ್ಳಾರಿ*
*ಖಾವಿಗೂ, ಖಾದಿಗೂ ಏನು ವ್ಯತ್ಯಾಸ?*
ವಿಧಿ!

*ಕೆ.ಮಲ್ಲೇಶ, ಕೊಡಸೋಗೆ*
*ದೇವರು ಸರ್ವವ್ಯಾಪಿಯಾದಮೇಲೆ ದೇವರಿಗೇಕೆ ಮಠ- ಮಂದಿರ ಸಾರ್?*
ಗಾಳಿ ಜಗವ್ಯಾಪಿಯಾಗಿದ್ದರೂ ದೇಹದಲ್ಲಿದ್ದರೆ ಮಾತ್ರ ಜೀವ. ದೇವ ಮಠ– ಮಂದಿರದ ಜೀವ!

*ಡಿ.ಎಸ್.ಪಂಕಜಸುಬ್ರಮಣ್ಯಂ, ಬೆಂಗಳೂರು*
*ದೇವಸ್ಥಾನಗಳಲ್ಲಿ ಹಣ ಕೊಟ್ಟವರಿಗೆ ಒಂದು ರೀತಿ, ಕೊಡದವರಿಗೆ ಒಂದು ರೀತಿ ಮಾಡುವುದು ಸರಿಯೇ?*
ಪೀತಾಂಬರ ತೊಟ್ಟ ವಿಷ್ಣುವಿಗೆ ಮಗಳನ್ನು, ದಿಗಂಬರನಾದ ಶಿವನಿಗೆ ಹಾಲಾಹಲವನ್ನು ಸಮುದ್ರರಾಜ ನೀಡಿದಂದಿನಿಂದ ಅದೇ ನಮ್ಮ ಪದ್ಧತಿ!

*ಜೆ.ಪ್ರದೀಪಕುಮಾರ, ಹೂವಿನಹಡಗಲಿ*
*ಈ ಅಂಕಣಕ್ಕೆ ಪ್ರಶ್ನೆ ಬರೆಯುವಾಗ ನನ್ನ ಮಗ ಅಡ್ಡಿಪಡಿಸುತ್ತಾನಲ್ಲಾ...?*
ವೆರಿ ಗುಡ್. ಮುಂದೆ ವಿದ್ಯಾರ್ಥಿ ಮುಖಂಡನಾಗಿ ಡೌನ್ ವಿತ್ ಎಕ್ಸಾಮ್ಸ್ ಎನ್ನುತ್ತಾ ಖ್ಯಾತನಾಗುವುದರ ಮುನ್ಸೂಚನೆ ಇದು!

*ಡಿ.ದೇವರಾಜು, ಬೆಂಗಳೂರು*
*ತಾಳಿ ಕಟ್ಟುವ ತನಕ ಹೆಣ್ಣು ತಲೆ ತಗ್ಗಿಸಿ ನಡೆಯುವುದೇಕೆ?*



ಕಣದಲ್ಲಿ ಎದುರಾಳಿಯನ್ನು ಎತ್ತಿ ಒಗೆಯಲು ಮೊದಲು ತಲೆ ತಗ್ಗಿಸಿರಬೇಕು ಎಂಬುದು ಟಗರು, ಗೂಳಿಗೇ ತಿಳಿದಿರುವಾಗ ಹೆಣ್ಣಿಗೆ ತಿಳಿಯದಿರುತ್ತದೆಯೇ ದೇವರಾಜ್!

■ ರಾಮ್